

ಬವೋಬಾಬ್ ಮರ ಬಳಸಿಕೊಂಡು ರೂಪುಗೊಂಡಿರುವ ಬಾರ್

ಉತ್ಪನ್ನವಾಗಿದೆ. ಅರೇಬಿಕ್‌ನಲ್ಲಿ ಬುಹಿಹೂಬ್ ಎಂದರೆ ಹಲವಾರು ಬೀಜಗಳ ವೃಕ್ಷ ಎಂಬ ಅರ್ಥವಿದೆ. ಬವೋಬಾಬ್ ಮರಗಳಿಗೆ ಇತರ ಮರಗಳಿಗಿಂತ ಭಿನ್ನವಾದ, ವಿಶಿಷ್ಟವಾದ ದೇಹ ರಚನೆ ಇದೆ. ಅವುಗಳ ಕಾಂಡ ಖಡ್ಗಮೃಗದ ಚರ್ಮದಂತಿರುವ ತೊಗಟೆಯನ್ನು ಹೊಂದಿದೆ. ಕಾಂಡದಲ್ಲೆಲ್ಲೂ ರೆಂಬೆ, ಕೊಂಬೆಗಳಿರದೆ ಮರದ ತುದಿಯಲ್ಲಿ ಬೇರುಗಳಂತೆ ಕಾಣುವ ರೆಂಬೆಗಳಿರುವ ಈ ಮರಗಳು ತಲೆಕೆಳಗಾಗಿ ನಿಂತಂತೆ ತೋರುತ್ತವೆ!

ಬವೋಬಾಬ್‌ಗಳ ವೈಶಿಷ್ಟ್ಯದ ಕುರಿತು ಹಲವಾರು ದಂತಕಥೆಗಳಿವೆ. ಬೈಬಲ್‌ನಲ್ಲಿ ಬರುವ ‘ನೋವಾಸ್ ಆರ್ಕ್’ ನಾವೆಯಲ್ಲಿದ್ದ ಎಲ್ಲ ಪ್ರಾಣಿಗಳಿಗೆ, ನಾವೆಯಿಂದ ಇಳಿಯುವಾಗ ಪರಿಪೂರ್ಣ ಕಾಡು ಬೆಳೆಸಲು ದೇವರು ಒಂದೊಂದು ಗಿಡ ಕೊಟ್ಟನಂತೆ. ಕೊನೆಯದಾಗಿ ಇಳಿದ ಕತ್ತೆಕಿರುಬಕ್ಕೆ ಈ ಬವೋಬಾಬ್ ಗಿಡ ಸಿಕ್ಕಿತಂತೆ. ಇದರ ವಿಚಿತ್ರ ಆಕಾರ ನೋಡಿ ಬೇಸರಗೊಂಡ ಕತ್ತೆಕಿರುಬ ಅದನ್ನು ತಲೆಕೆಳಗಾಗಿ ಎಸೆದು ಹೋಯಿತಂತೆ. ಅಂದಿನಿಂದ ಈ ಮರಗಳು ತಲೆಕೆಳಗಾಗಿ ಬೆಳೆಯುತ್ತಿವೆ ಎಂಬುದು ಒಂದು ಕಥೆಯಾದರೆ, ಆಫ್ರಿಕಾದ ಮೂಲನಿವಾಸಿಗಳಾದ ಬುಷ್ಮನ್ ಪಂಗಡದವರ ಪ್ರಕಾರ, ಪೂರ್ಣ ಪ್ರಮಾಣದಲ್ಲಿ ಬೆಳೆದ ಬವೋಬಾಬ್ ಮರಗಳು ಸ್ವರ್ಗದಿಂದ ತಲೆಕೆಳಗಾಗಿ ಉದುರುತ್ತವಂತೆ!

ಫ್ರೆಂಚ್ ಜೀವಶಾಸ್ತ್ರಜ್ಞ, ನಿಸರ್ಗವಾದಿ ಮೈಕೇಲ್ ಆಡನ್ಸನ್ ಮೊದಲ ಬಾರಿಗೆ ಈ ಮರದ ವೈಜ್ಞಾನಿಕ ವಿವರಣೆ ನೀಡಿ, ಈ ವಿಶಿಷ್ಟ ಮರಕ್ಕೆ ‘ಆಡನ್ಸೋನಿಯ’ ಎಂಬ ತನ್ನದೇ ಹೆಸರಿನ ನಾಮಕರಣ ಮಾಡಿದ್ದಾನೆ. ಹಾಗೆಯೇ ಇವುಗಳಿಗೆ ಕಲಬ್ಯಾಶ್, ಕ್ರೀಮ್ ಟಾರ್ಚರ್, ಸೋರ್ಗೋಡ್, ಮಂಕಿ ಬ್ರೆಡ್ ಟ್ರೀ, ಎಲಿಫೆಂಟ್ ಫ್ರೂಟ್ ಟ್ರೀ ಇತ್ಯಾದಿ ಹೆಸರುಗಳೂ ಇವೆ.

ಸುಮಾರು ಹದಿನಾರು ಅಡಿಗಳಿಂದ ತೊಂಬತ್ತೆಂಟು ಅಡಿ ಎತ್ತರದವರೆಗೆ ಬೆಳೆಯುವ ಇವುಗಳ ಕಾಂಡದ ವ್ಯಾಸ ಸುಮಾರು ಇಪ್ಪತ್ತಮೂರು ಅಡಿಗಳಿಂದ ಮೂವತ್ತನಾಲ್ಕು ಅಡಿಗಳು. ದಕ್ಷಿಣ ಆಫ್ರಿಕಾದ ಲಿಂಪಾಪೊ ಪ್ರಾಂತ್ಯದಲ್ಲಿರುವ ಬವೋಬಾಬ್ ಮರವೊಂದರ ಸುತ್ತಳತೆ ಬರೋಬ್ಬರಿ 154 ಅಡಿ ಹಾಗೂ ಅದರ ವ್ಯಾಸ ಐವತ್ತೆರಡು ಅಡಿ ಇದ್ದು, ವಿಶ್ವದಲ್ಲಿಯೇ ಅತಿ ದೊಡ್ಡ ಬವೋಬಾಬ್ ವೃಕ್ಷವೆಂಬ ಖ್ಯಾತಿ ಅದರದು. ಆದರೆ ಆ ದೈತ್ಯ ವೃಕ್ಷವೀಗ ಎರಡು ಭಾಗಗಳಾಗಿ ಬೇರ್ಪಟ್ಟಿರುವುದರಿಂದ ದಕ್ಷಿಣ ಆಫ್ರಿಕಾದಲ್ಲೇ ಇರುವ ಮೂವತ್ತೊಂದು ಅಡಿ ವ್ಯಾಸ ಹಾಗೂ ನೂರಹನ್ನೆರಡು ಅಡಿ ಸುತ್ತಳತೆಯುಳ್ಳ ‘ಸನ್‌ಲ್ಯಾಂಡ ಬವೋಬಾಬ್’ ಮರ ವಿಶ್ವದ ದೊಡ್ಡ ಬವೋಬಾಬ್ ವೃಕ್ಷ ಎನ್ನುವ ಖ್ಯಾತಿಗೆ ಪಾತ್ರವಾಗಿದೆ. ಅದರ ವಯಸ್ಸು 1060 ವರ್ಷವಾಗಿದ್ದು, ಅತ್ಯಂತ ಪುರಾತನ ವೃಕ್ಷವೆಂಬ ಹೆಗ್ಗಳಿಕೆಯನ್ನೂ ಹೊಂದಿದೆ.

## ಬಹೂಪಯೋಗಿ ಬವೋಬಾಬ್

ಬವೋಬಾಬ್‌ಗಳು ಮನುಷ್ಯ ಹಾಗೂ ಪ್ರಾಣಿಗಳಿಗೆ ಆಹಾರ ಮತ್ತು ನೆರಳು ನೀಡುವುದರಿಂದ ಅವುಗಳನ್ನು ‘ಜೀವ ವೃಕ್ಷ’ಗಳೆಂದೂ ಕರೆಯುತ್ತಾರೆ. ಅವುಗಳ ದೊಡ್ಡ ಗಾತ್ರದ ಹೂವುಗಳು ಬಿಳಿಯ ಬಣ್ಣ ಹೊಂದಿದ್ದು, ಅರಳಿದ ಇಪ್ಪತ್ತನಾಲ್ಕು ಗಂಟೆಯೊಳಗೆ ಮರದಿಂದ ಉದುರಿ ಕಂದು ಬಣ್ಣಕ್ಕೆ ತಿರುಗುತ್ತವೆ ಹಾಗೂ ಕಟುವಾದ ವಾಸನೆ ಬೀರುತ್ತವೆ. ಇವು ಜಿಂಕೆಯಂತಹ ಸಸ್ಯಾಹಾರಿ ಪ್ರಾಣಿಗಳಿಗೆ ಆಹಾರ.

ಮೊಟ್ಟೆಯಾಕಾರದಲ್ಲಿರುವ ಬವೋಬಾಬ್‌ಗಳ ಹಣ್ಣುಗಳು ಗಟ್ಟಿಯಾದ ಹೊರ ಕವಚ ಹೊಂದಿವೆ. ಆ ಕವಚದೊಳಗೆ ಬೀಜಗಳೊಂದಿಗೆ ಸ್ವಲ್ಪ ಹುಳಿಯಾದ ತಿರುಳು ಇರುತ್ತದೆ. ಆ ತಿರುಳನ್ನು ಒಣಗಿಸಿ ಪುಡಿಮಾಡಿ ರುಚಿಕರವಾದ ಜಾಮ್ ಹಾಗೂ ಆಹ್ಲಾದಕರ ಜ್ಯೂಸ್ ತಯಾರಿಸುತ್ತಾರೆ. ಆ ಜ್ಯೂಸ್ ಜ್ವರಕ್ಕೆ ರಾಮಬಾಣವೆಂಬ ನಂಬಿಕೆ ಇದೆ. ಹಣ್ಣಿನ ಪುಡಿಯನ್ನು ನೀರಾಗಿರುವ ಅಡುಗೆ ಪದಾರ್ಥಗಳನ್ನು ಮಂದವಾಗಿಸಲು ಬಳಸುತ್ತಾರೆ. ಅಂತೆಯೇ ಗೋಂದು, ಸೋಪು, ರಬ್ಬರ್ ಇತ್ಯಾದಿ ಪದಾರ್ಥಗಳನ್ನೂ ತಯಾರಿಸುತ್ತಾರೆ. ಮರದ ತೊಗಟೆಯಿಂದ ಮೀನಿನ ಬಲೆ, ಬಟ್ಟೆಗಳನ್ನು ತಯಾರಿಸುತ್ತಾರೆ. ತನ್ನ ಗಾತ್ರ ಹಾಗೂ ಗಟ್ಟಿತನದಿಂದಾಗಿ ಅನೇಕ ಪ್ರಾಣಿ, ಪಕ್ಷಿಗಳಿಗೆ ಈ ಮರ ಆವಾಸಸ್ಥಾನವಾಗಿದೆ. ಹಲವಾರು ಬೃಹದಾಕಾರದ ಬವೋಬಾಬ್ ಮರಗಳನ್ನು ಬಾರ್, ಅಂಗಡಿ ಹಾಗೂ ಪ್ರವಾಸಿ ತಾಣಗಳನ್ನಾಗಿ ಪರಿವರ್ತಿಸಿ ಆರ್ಥಿಕ ಚಟುವಟಿಕೆಯನ್ನೂ ನಡೆಸಲಾಗುತ್ತಿದೆ.

ಒಣ ಪ್ರದೇಶದಲ್ಲಿನ ಜನರ ಪಾಲಿಗೆ ‘ಕಲ್ಪವೃಕ್ಷ’ದಂತಿರುವ ಈ ಸಹಸ್ರಾಯುಷಿ ಮರಗಳಿಗೂ ಜಾಗತಿಕ ತಾಪಮಾನ ಏರಿಕೆಯ, ಹವಾಮಾನ ವೈಪರೀತ್ಯದ ಬಿಸಿ ತಟ್ಟಿದೆ. ಈಗಾಗಲೇ ಎರಡು ಜಾತಿಯ ಬವೋಬಾಬ್ ಮರಗಳು ಅಳಿವಿನಂಚಿನಲ್ಲಿವೆ.